# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **86** |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯವು ಅಧಿಕೃತವಾಗಿ ವಿದ್ಯುತ್ ಹೆಚ್ಚುವರಿ ರಾಜ್ಯವಾದರೂ ಸಹ ಬೆಂಗಳೂರು ಮತ್ತು ಇತರೆ ನಗರ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಕಾಣಿಸಿಕೊಳ್ಳಲು ಟ್ರಾನ್ಸ್‌ಫಾರ್ಮರ್‌ಗಳ ಓವರ್ ಲೋಡ್, ನಿರಂತರ ನಿರ್ವಹಣೆ ಮತ್ತು ತಾಂತ್ರಿಕ ನಿರ್ಬಂಧಗಳು ಪ್ರಮುಖ ಕಾರಣಗಳು ಇರುವುದು ನಿಜವೇ; ಇದ್ದಲ್ಲಿ, ಈ ನಗರಗಳಿಗೆ ವಿದ್ಯುತ್‌ನ್ನು ಪರಿಣಾಮಕಾರಿಯಾಗಿ ನೀಡಲು ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ಸಮರ್ಪಕ ವಿದ್ಯುತ್ ಸರಬರಾಜಿಗಾಗಿ ಟ್ರಾನ್ಸ್‌ಫಾರ್ಮರ್‌ಗಳು ಓವರ್ ಲೋಡ್ ಆಗದಂತೆ, ಪರಿವರ್ತಕಗಳ ಎಲ್ಲಾ ಫೇಸ್‌ಗಳ ಲೋಡ್ ಬ್ಯಾಲನ್ಸ್ ಮಾಡಿ, ಅವಶ್ಯಕತೆ ಇರುವ ಕಡೆಗಳಲ್ಲಿ ಪರಿವರ್ತಕಗಳನ್ನು ಉನ್ನತ್ತೀಕರಿಸಿ ಹಾಗೂ ಹೆಚ್ಚುವರಿ ಪರಿವರ್ತಕಗಳನ್ನು ಲೋಡ್ ಸೆಂಟರ್‌ಗಳಲ್ಲಿ ಅಳವಡಿಸಲಾಗುತ್ತಿದೆ. ಕಾಲಕಾಲಕ್ಕೆ ಪರಿವರ್ತಕಗಳ ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.<br><br>ವಿತರಣಾ ಜಾಲವು ಸಮರ್ಪಕವಾಗಿ ಕಾರ್ಯನಿರ್ವಹಿಸಲು, ಮಾಸಿಕ, ತ್ರೈಮಾಸಿಕ ಮತ್ತು ಅರ್ಧವಾರ್ಷಿಕ Preventive maintence ಹಾಗೂ ಮುಂಗಾರು ಪೂರ್ವ ನಿರ್ವಹಣೆಗಳನ್ನು ನಿಯಮಿತವಾಗಿ ಕೈಗೊಳ್ಳಲಾಗುತ್ತಿದೆ. ಹಾಗೂ ಈ ನಿರ್ವಹಣಾ ಕಾರ್ಯಗಳ ಕುರಿತು ಗ್ರಾಹಕರಿಗೆ ಮುಂಚಿತವಾಗಿ ಮಾಹಿತಿ ನೀಡಲಾಗುತ್ತದೆ. |
| ಆ) | ರಾಜ್ಯದಲ್ಲಿ ಸುಮಾರು ಶೇ.50 ರಷ್ಟು ವಿದ್ಯುತ್‌ನ್ನು ನವೀಕರಿಸಬಹುದಾದ ಸೌರ ಮತ್ತು ಪವನ ಶಕ್ತಿಯಿಂದ ಉತ್ಪಾದಿಸುತ್ತಿದ್ದು, ಉತ್ಪಾದಿಸಿರುವ ಶಕ್ತಿಯನ್ನು ಸಂಗ್ರಹಿಸಲು ಸೂಕ್ತ ಮೂಲಸೌಕರ್ಯ ಇಲ್ಲದೇ ವಿದ್ಯುತ್ ವ್ಯತ್ಯಯವಾಗುತ್ತಿರುವುದು ನಿಜವೇ ಇದ್ದಲ್ಲಿ, ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸರ್ಕಾರವು, ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸುವ ವಿದ್ಯುತ್‌ನ್ನು ಶೇಖರಿಸಲು Battery Energy Storage System (BESS) ಮತ್ತು Pumped Storage project ಗಳ ಸ್ಥಾಪನೆಗೆ ಒತ್ತು ನೀಡುತ್ತಿದೆ. ರಾಜ್ಯ ಸರ್ಕಾರದಿಂದ ಭವಿಷ್ಯದ ರಾಜ್ಯದ ವಿದ್ಯುತ್ ಬೇಡಿಕೆ ಹಾಗೂ ಪೂರೈಕೆ ಕುರಿತಂತೆ Resource Adequacy Plan (RAP) ಅನ್ನು ಸಿದ್ಧಪಡಿಸಲಾಗಿರುತ್ತದೆ.<br><br>RAP ವರದಿಯನುಸಾರ, ನವೀಕರಿಸಬಹುದಾದ ಇಂಧನ ಮೂಲಗಳಿಂದ 2029-30 ಕ್ಕೆ 19,263 ಮೆ.ವ್ಯಾ.ನಷ್ಟು ಮತ್ತು 2034-35 ಕ್ಕೆ 38,263 ಮೆ.ವ್ಯಾ.ನಷ್ಟು ಹೆಚ್ಚುವರಿ ವಿದ್ಯುತ್ ಉತ್ಪಾದನೆಯ ಅವಶ್ಯಕತೆಯಿರುತ್ತದೆ.<br><br>ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದನೆಯಾಗುವ ವಿದ್ಯುತ್ ಅನಿಶ್ಚಿತತೆ ಮತ್ತು ವ್ಯತ್ಯಾಸಗಳಿಂದ ಕೂಡಿರುವುದರಿಂದ ಇವುಗಳನ್ನು ಸಮತೋಲನಪಡಿಸಲು ವರದಿಯನುಸಾರ 2029-30 ಕ್ಕೆ 3000 MWhr/2 hr ಮತ್ತು 2034-35ಕ್ಕೆ 6000 MWhr/2 hr ಬ್ಯಾಟರಿ ಶೇಖರಣಾ ವ್ಯವಸ್ಥೆಯ ಅವಶ್ಯಕತೆಯಿದೆ.<br><br>ಈ ನಿಟ್ಟಿನಲ್ಲಿ ಬ್ಯಾಟರಿ ಶೇಖರಣೆ ವ್ಯವಸ್ಥೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:<br>- ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಇವ್ಯಾಕ್ಯುಯೇಟ್ ಆಗುತ್ತಿರುವ ಕೆಪಿಟಿಸಿಎಲ್‌ನ ಆಯ್ದ 7 ಉಪಕೇಂದ್ರಗಳಲ್ಲಿ 500MW/1000MWhr ಬ್ಯಾಟರಿ ಶೇಖರಣಾ ವ್ಯವಸ್ಥೆಯನ್ನು ಕೇಂದ್ರ ಸರ್ಕಾರದ VGF ನಡಿ Tariff Based Competitive Bidding (TBCB) ನಡಿ ಸ್ಥಾಪಿಸಲು ಕ್ರಮ ಕೈಗೊಂಡಿದ್ದು, 350MW/700MWh BESS ಸಾಮರ್ಥ್ಯಕ್ಕೆ KERC ಅನುಮೋದನೆ ಪಡೆದು Letter of award ನೀಡಲಾಗಿದೆ. ಉಳಿದ |

| | | |
|---|---|---|
| | | 150MW/300MWh ಸಾಮರ್ಥ್ಯಕ್ಕೆ ಮರು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>➢ ಕ್ರೆಡಲ್ ವತಿಯಿಂದ ಪಾವಗಡ ಸೌರ ಪಾರ್ಕ್ ನಲ್ಲಿ EPC ಅಡಿ 2MWac/4.5MWhr ಸಾಮರ್ಥ್ಯದ ಬ್ಯಾಟರಿ ಶೇಖರಣೆ ವ್ಯವಸ್ಥೆಯೊಂದಿಗೆ ಸೌರ ಯೋಜನೆಯನ್ನು ಅನುಷ್ಠಾನಗೊಳಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಡಿಸೆಂಬರ್-2025ರ ಅಂತ್ಯಕ್ಕೆ ಅನುಷ್ಠಾನಗೊಳ್ಳುವ ನಿರೀಕ್ಷೆಯಿದೆ.<br>➢ ಕಲಬುರಗಿ ತಾಲ್ಲೂಕಿನ ನದಿಸಿನ್ನೂರು, ಫಿರೋಜಾಬಾದ್ ಹಾಗೂ ಕಿರಣಗಿ ಗ್ರಾಮಗಳ ವ್ಯಾಪ್ತಿಯಲ್ಲಿ TBCB ಅಡಿಯಲ್ಲಿ 100MWhr BESS ನೊಂದಿಗೆ 100MW ಸೌರ ಯೋಜನೆಗೆ KERC ಅನುಮೋದನೆ ಪಡೆದು Letter of award ನೀಡಲಾಗಿದ್ದು, ಫೆಬ್ರುವರಿ 2027 ರ ಅಂತ್ಯಕ್ಕೆ ಯೋಜನೆ ಅನುಷ್ಠಾನಗೊಳ್ಳುವ ನಿರೀಕ್ಷಣೆಯಲ್ಲಿದೆ.<br>➢ ಪಾವಗಡ ತಾಲ್ಲೂಕಿನ Ryapte ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 250MW ಸೋಲಾರ್ ಜೊತೆಗೆ 1100MWhr ಬ್ಯಾಟರಿ ಶೇಖರಣೆ ಘಟಕವನ್ನು ಸ್ಥಾಪಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>➢ ಪಾವಗಡ ತಾಲ್ಲೂಕಿನ Ryapte ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2000MW ಸೋಲಾರ್ ಜೊತೆಗೆ 1000MWhr ಬ್ಯಾಟರಿ ಶೇಖರಣೆ ಘಟಕವನ್ನು ಸ್ಥಾಪಿಸಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು KERC ಅನುಮೋದನೆ ಪಡೆಯಬೇಕಿದೆ.<br>➢ ಇದಲ್ಲದೇ, RAP ಅನುಸಾರ ವರ್ಷ 2028-29 ರವರೆಗೆ ಅವಶ್ಯವಿರುವ ಸಾಮರ್ಥ್ಯಕ್ಕೆ ಕಾರ್ಯಸಾಧ್ಯವಿರುವ ಕೆಪಿಟಿಸಿಎಲ್‌ನ 27 ಉಪಕೇಂದ್ರಗಳಲ್ಲಿ ಸೌರ ಮತ್ತು ಪವನ ಹೈಬ್ರೀಡ್ ಯೋಜನೆಗಳೊಂದಿಗೆ 2800MWhr ಬ್ಯಾಟರಿ ಶೇಖರಣೆ ಘಟಕಗಳನ್ನು ಸ್ಥಾಪಿಸಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು KERC ಅನುಮೋದನೆ ಪಡೆಯಬೇಕಿದೆ.<br>➢ 2000 ಮೆ.ವ್ಯಾ ಶರಾವತಿ Pumped Storage ಯೋಜನೆಯನ್ನು ಕೆಪಿಸಿಎಲ್ ಇಂದ ಕೈಗೆತ್ತಿಕೊಳ್ಳಲಾಗಿದೆ. 1000 ಮೆ.ವ್ಯಾ Pumped Storage Plant ಯೋಜನೆಯನ್ನು ಪಿಸಿಕೆಎಲ್ ರವರಿಂದ ಕೈಗೆತ್ತಿಕೊಳ್ಳಲಾಗಿದೆ. |
| ಇ) | ರಾಜ್ಯದಲ್ಲಿ 'ಬಿ' ಖಾತೆ ಮನೆಗಳಿಗೆ (ಪ್ಲಾನ್ ಇಲ್ಲದ/ಅನಧಿಕೃತ) ಇಲಾಖೆ ವತಿಯಿಂದ ವಿದ್ಯುತ್ ಸಂಪರ್ಕ ನೀಡಲಾಗುತ್ತಿಲ್ಲ ಎಂಬ ಮಾಹಿತಿ ನಿಜವೇ; ಅಥವಾ ರಾಜ್ಯದಲ್ಲಿ ಎಲ್ಲಾ ಮನೆಗಳಿಗೆ ವಿದದ್ಯುತ್ತ್ ಸಂಪರ್ಕ ಕಲ್ಪಿಸಲಾಗಿದೆಯೇ; ಸರ್ವೋಚ್ಚ ನ್ಯಾಯಾಲಯದ ಹಲವಾರು ಆದೇಶಗಳಲ್ಲಿ ವಿದ್ಯುತ್‌ಚ್ಛಕ್ತಿಯು ಸಂವಿಧಾನದಡಿಯಲ್ಲಿ ನಾಗರೀಕರ ಮೂಲಭೂತ ಹಕ್ಕಾಗಿರುತ್ತದೆ ಎಂದು ತೀರ್ಪು ನೀಡಿದ್ದು, ರಾಜ್ಯದ 'ಬಿ' ಖಾತೆ ಮನೆಗಳಿಗೆ (ಪ್ಲಾನ್ ಇಲ್ಲದೆ/ಅನಧಿಕೃತ) ವಿದ್ಯುತ್ ಸಂಪರ್ಕ ನೀಡದೆ ಇದ್ದಲ್ಲಿ ಯಾವ ಕಾರಣಗಳಿಂದ ನೀಡಿರುವುದಿಲ್ಲ? (ವಿವರ ನೀಡುವುದು) | ನ್ಯಾಯಾಲಯದ ಸಿವಿಲ್ ಅಪೀಲ್ ಆದೇಶ ಸಂಖ್ಯೆ: 14604/2024 ಮತ್ತು 14605/2024 ದಿನಾಂಕ: 17.12.2024 ರಂದು ನೀಡಿರುವ ಆದೇಶದಲ್ಲಿ, ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ನೀಡುವಾಗ ಸಕ್ಷಮ/ಸ್ಥಳೀಯ ಪ್ರಾಧಿಕಾರದಿಂದ ನೀಡುವ ವಾಸಯೋಗ್ಯ/ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಅರ್ಜಿದಾರರು ಸಲ್ಲಿಸುವುದು ಕಡ್ಡಾಯವೆಂದು ಸೂಚಿಸಲಾಗಿದೆ.<br><br>ಅದರಂತೆ, ನ್ಯಾಯಾಲಯದ ಆದೇಶಗಳಲ್ಲಿ ನಿರ್ದಿಷ್ಟಪಡಿಸಲಾದ ಆದೇಶ/ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ. |

ಸಂಖ್ಯೆ: ಎನರ್ಜಿ 160 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

12/8